ಬರುತ್ತಿದೆ. ಇನ್ನು ಕೊಳವೆ.ಬಾವಿಗಳು ಕೆಟ್ಟಿವೆ ಎಂದು ಮಾನ್ಯಸದಸ್ಯರು ಹೇಳಿದ್ದಾರೆ. ನನಗೆ ಬಂದ ವರದಿಯ ಪ್ರಕಾರ ೧೨ ಕೊಳವೆ ಬಾವಿಗಳು ಕೆಟ್ಟಿವೆ, ಅವುಗಳನ್ನು ಈ ತಿಂಗಳಲ್ಲಿ ದುರಸ್ತಿ ಮಾಡುತ್ತೇವೆ. ಕೆಲವುಗ್ರಾಮಗಳಲ್ಲಿ ಕೊಳವೆ ಬಾವಿಗಳು ಇಲ್ಲ ಅಂತ ಹೇಳಿದರು, ಅದನ್ನು ಮಾಡಿಸಿಕೊಡುತ್ತೇನೆ ಎಂದು ಭರವಸೆ ಕೊಡುತ್ತೇನೆ.

ಶ್ರೀ ಪ್ರಭಾಕರ್ ರಾನೆ.ಎನ್ .— ಅಧ್ಯಕ್ಷರೇ, ಕಾರವಾರದ ಕಾಸ್ಟಿಕ್ ಸೋಡಾ ಕಾರ್ಖಾನೆಯಿಂದ ಸಮುದ್ರಕ್ಕೆ ವಿಷಪೂರಿತ ನೀರು ಸೇರುತ್ತಿರುವುದರಿಂದ ಕಳೆದ ಅನೇಕ ದಿನಗಳಿಂದ ಸಮುದ್ರದಲ್ಲಿರುವ ಮೀನು ಕೂಡ ವಿಷಪೂರಿತವಾಗಿದೆ. ಇದನ್ನು ಸೇವಿಸುವುದು ಜೀವಕ್ಕೆ ಅಪಾಯಕರ. ಈ ಮೀನನ್ನೇ ಸೇವಿಸಿದರೆ ಜಪಾನಿನಂತೆ ಈ ಭಾಗದ ಜನತೆಯೂ ಕೂಡ ಮೀನು ಮಾಟ ರೋಗದಿಂದ ಬಳಲುವರು. ಇದು ನಿಜವಾಗಿಯೂ ದುರದೃಷ್ಟಕರ. ಈ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳ ವಿಶೇಶ ಕಾರ್ಯದರ್ಶಿ ಶ್ರೀ ಬಾಲಸುಬ್ರಮಣ್ಯಂ ಅವರು ನೀಡಿದ ಪತ್ರಿಕಾ ಹೇಳಿಕೆ, ಅದಕ್ಕೆ ಪೂರಕವಾಗಿ ಕಾರವಾರದ ಪುರಸಭೆ ಮತ್ತು ವರ್ಕಿಂಗ್ ಸಂಘದವರು ಪ್ರಕಟಿಸಿದ ಪ್ರಕಟನೆಯನ್ನು ಕೇಳಿ ಕಾರವಾರದಲ್ಲಿ ಮೀನು ವ್ಯಾಪಾರ ಪೂರ್ಣವಾಗಿ ಸ್ಥಗಿತಗೊಂಡಿದೆ. ಮೀನಿನ ಮೇಲೆ ಜೀವನ ನಡೆಸುವ ಮೀನುಗಾರರು ಇದರಿಂದ ಹತಾಶರಾಗಿದ್ದಾರೆ. ಅಲ್ಲದೆ, ಮೀನನ್ನು ತಿಂದೇ ಉಪಜೀವನ ಮಾಡುವಂಥ ಬಡವರು ಕಂಗಾಲಾಗಿದ್ದಾರೆ.

ಪರಿಸರ ನಿಯಂತ್ರಣ ಮಂಳಿಯ ಕಾರ್ಯದರ್ಶಿಯವರು ಬಂದು...

ಅಧ್ಯಕ್ಷರು.— ಈ ಬಗ್ಗೆ ಸರ್ಕಾರದವರು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಅಲ್ಲವೇ ನೀವು ಹೇಳಬೇಕಾಗಿರುವುದು !

ಶ್ರೀ ಪ್ರಭಾಕರ ರಾಣೆ ಎಸ್.—ಇಲ್ಲ, ಇದರ ಬಗ್ಗೆ ಎರಡು ವಿಷಯ ತಿಳಿಸಬೇಕಾಗಿದೆ, ಪರಿಸರ ನಿಯಂತ್ರಣ ಮಂಡಳಿಯ ಕಾರ್ಯದರ್ಶಿಯವರು ಸದರಿ ಕಾರ್ಖಾನೆಗೆ ಅನಿರೀಕ್ಷಿತ ಭೇಟಿ ಕೊಟ್ಟಾಗ ಅಲ್ಲಿ ನೀರು ವಿಷಪೂರಿತವಾಗಿದೆಯೆಂಬ ಅಭಿಪ್ರಾಯಕ್ಕೆ ಬಂದು ಈ ಕಾರ್ಖಾನೆಯನ್ನು ಬಂದ್ ಮಾಡಿಸಿದರು, ಆದರೆ ಮುಂದೆ ತಜ್ಞರ ವರದಿ ಬಂದು ಈ ಕಾರ್ಖಾನೆ ಪುನಃ ಪ್ರಾರಂಭವಾಯಿತು. ಮಾನ್ಯ ಮುಖ್ಯ ಮಂತ್ರಿಯವರು ಚುನಾವಣೆ ಕಾಲದಲ್ಲಿ ಕಾರವಾರಕ್ಕೆ ಭೇಟಿ ನೀಡಿದಾಗ ಅಲ್ಲಿನ ಜನರ ಪ್ರತಿಭಟನೆಯನ್ನು ಅನುಸರಿಸಿ ಈ ಕಾರ್ಖಾನೆಯನ್ನು ಬಂದ್ ಮಾಡುವುದಕ್ಕೆ ಆದೇಶವನ್ನು ನೀಡಿದ್ದರು. ಆದರೆ ಆಶ್ಚರ್ಯಕರ ಎನ್ನುವಂತೆ ಸರಿಯಾಗಿ ಚುನಾವಣೆ ಮುಗಿದ ನಂತರ ದಿನಾಂಕ ೫-೩-೧೯೮೫ರಂದು ಸಂಜೆ ನಾಲ್ಕು ಗಂಟೆ ಐದು ನಿಮಿಷಕ್ಕೆ ಮತ್ತೆ ಕಾರ್ಖಾನೆ ಪ್ರಾರಂಭವಾಗಿದೆ. ಮತ್ತೆ ವಿಷಪೂರಿತ ನೀರನ್ನು ಸಮುದ್ರಕ್ಕೆ ಬಿಡುತ್ತಿದ್ದಾರೆ. ಕಾರವಾರದ ಜನತೆ ಹಾಹಾಕಾರುತ್ತಿದ್ದಾರೆ. ಇಡೀ ಕಾರವಾರದಲ್ಲೇ ಗಂಭೀರವಾದ ಪರಿಸ್ಥಿತಿ ಉದ್ಭವಿಸಿದೆ. ಇಂತಹ ಗಂಭೀರವಾದ ಸಮಸ್ಯೆಗೆ ಕೂಡಲೇ ಸೂಕ್ತ ಪರಿಹಾರವನ್ನು ಕೈಗೊಳ್ಳಬೇಕು. ಇಲ್ಲದಿದ್ದರೆ ಕಾರವಾರದ ಜನತೆ, ಅದರಲ್ಲೂ ವಿಶೇಷವಾಗಿ ಮೀನುಗಾರರು ತಮ್ಮ ಅಸ್ತಿತ್ವವನ್ನೇ ಪ್ರಶ್ನಿಸಿಕೊಳ್ಳುವಂತಾಗುತ್ತದೆ. ಈ ಗಂಭೀರ ಸಮಸ್ಯೆಯ ಕಡೆಗೆ ಅತ್ಯಂತ ತ್ವರಿತವಾಗಿ ಗಮನ ಕೊಡಬೇಕಾಗಿದೆ,

ಅಧ್ಯಕ್ಷರು.—ರಾಣೆಯವರೇ, ನೀವು ಭಾಷಣ ಮಾಡುವುದಕ್ಕೆ ಹೊರಟಿದ್ದೀರಲ್ಲ. ಹೇಳುವುದೇನಿದ್ದರೂ ಸಂಕ್ಷಿಪ್ತವಾಗಿ ಹೇಳಿಬಿಡಿ,

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ನನ್ನದೊಂದು ಕ್ರಿಯಾಲೋಪ ಇದೆ. ೩೩೪ರ ವ್ಯಾಪ್ತಿ ಪ್ರಕಾರ ಭಾಷಣ ಮಾಡುವುದಕ್ಕೆ ಅವಕಾಶ ಇಲ್ಲ. ವಿಷಯ ಪ್ರಸ್ತಾವನೆ ಮಾಡಿ ಸರ್ಕಾರದ ಉತ್ತರವನ್ನು ಕೇಳಬೇಕೇ ಹೊರತಾಗಿ ಹತ್ತು ನಿಮಿಷಗಳಿಂದಲೂ ಭಾಷಣ ಮಾಡುತ್ತಿದ್ದರೆ ಸಭೆಯ ಕಾರ್ಯಕಲಾಪಗಳು ನಡೆಯುವುದು ಹೇಗೆ ?

ಶ್ರೀ ಪ್ರಭಾಕರ ರಾಣೆ.—ವಿಷಯದ ಗಂಭೀರತೆಯನ್ನು ಸರ್ಕಾರದ ಗಮನಕ್ಕೆ ತರುವುದು ನನ್ನ ಉದ್ದೇಶವಾಗಿದೆ.

ಅಧ್ಯಕ್ಷರು.—ಸರ್ಕಾರದ ಗಮನಕ್ಕೆ ತಂದುಬಿಟ್ಟಿದ್ದೀರಲ್ಲ ?

ಶ್ರೀ ಸಿ. ಭೈರೇಗೌಡ (ಮಾನ್ಯ ಮೀನುಗಾರಿಕೆ ಮತ್ತು ಬಂದರು ಸಚಿವರು).—ಜನರ ಆರೋಗ್ಯವನ್ನು ಕಾಪಾಡತಕ್ಕಂಥಾದ್ದು ಸರ್ಕಾರದ ಜವಾಬ್ದಾರಿ. ಮಾನ್ಯ ಸದಸ್ಯರು ಈಗ ತಾನೆ ವಿಷಯವನ್ನು

ಪ್ರಸ್ತಾಪ ಮಾಡಿದ್ದಾರೆ. ಅವರು ಹೇಳಿರತಕ್ಕ ವಿಷಯವನ್ನು ಗಣನೆಗೆ ತೆಗೆದುಕೊಂಡು ಸಾಧ್ಯವಿರುವ ಎಲ್ಲಾ ಕಾರ್ಯಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳುತ್ತದೆ ಎಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಪ್ರಭಾಕರ ರಾಣೆ ಎನ್.--ಮಾನ್ಯ ಅಧ್ಯಕ್ಷರೇ, ನಾನು ಈಗ ತಾನೆ ವಿಷಯವನ್ನು ಪ್ರಸ್ತಾಪ ಮಾಡಿದ್ದರೂ ಕೂಡ ಸರ್ಕಾರದವರು ಈಗಾಗಲೇ ಇದರ ಪೂರ್ಣ ಮಾಹಿತಿಯನ್ನು ಪಡೆದುಕೊಂಡಿದ್ದಾರೆ. ಇಲ್ಲಿ ವಿಷಯ ತೀರಾ ಗಂಭೀರವಾಗಿದೆ. ಹೀಗೆಯೇ ಮುಂದುವರೆಯುತ್ತಾ ಹೋದರೆ ಮೀನುಗಾರರ ಜೀವನ ಪರಸ್ಥಿತಿ ಇನ್ನೂ ದುಸ್ತರವಾಗುತ್ತದೆ. ಈಗಾಗಲೇ ಅವರು ಬೇರೆ ಕಡೆಗಳಿಗೆ, ಅಂದರೆ ಗೋವಾ ಮುಂತಾದ ಕಡೆಗಳಿಗೆ ವಲಸೆ ಹೋಗುವುದಕ್ಕೆ ಪ್ರಾರಂಭಿಸಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ (ಮಾನ್ಯ ಮುಖ್ಯಮಂತ್ರಿಗಳು).--ಮಾನ್ಯ ಅಧ್ಯಕ್ಷರೇ, ಮಾನ್ಯ ರಾಣೆಯವರು ಹೇಳಿರತಕ್ಕ ಮಾತಿನಲ್ಲಿ ಸ್ವಲ್ಪಮಟ್ಟಿಗೆ ಸತ್ಯ ಇದೆ, ಬಹಳ ಮಟ್ಟಿಗೆ ಅಸತ್ಯ ಇದೆ. ಇದಕ್ಕೆ ಮೊದಲು ಬಹುಶಃ ಒಂದು ವಾರದ ಮೊದಲು, ನಿರ್ದಿಷ್ಟವಾದ ತಾರೀಕು ನನಗೆ ನೆನಪು ಇಲ್ಲ. ನಾನು ಅಲ್ಲಿಗೆ ಹೋದಾಗ ನೂರಾರು ಮೀನುಗಾರರು ನನ್ನ ಹತ್ತಿರ ಬಂದು ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದರು. ಅದಕ್ಕೂ ಕೆಲವು ದಿವಸಗಳ ಮೊದಲು ನನ್ನ ಕಾರ್ಯದರ್ಶಿಯವರು ಪರಿಸರ ಮಾಲಿನ್ಯಕ್ಕೆ ಸಂಬಂಧಪಟ್ಟ ಕಾರ್ಯದರ್ಶಿಯವರು ಅಲ್ಲಿ ಹೋದರು. ಅವರು ಅಕಸ್ಮಾತ್ತಾಗಿ ಹೋಗಿ ಆ ಕಾರ್ಖಾನೆಯವರು ಮಾಲಿನ್ಯದಿಂದ ಕೂಡಿದ ನೀರನ್ನು ಡಿಸ್‌ಚಾರ್ಜ್ ಮಾಡತಕ್ಕಂಥಾದನ್ನು ನೋಡಿ, ಸಮುದ್ರದಲ್ಲಿರತಕ್ಕಂಥ ಮೀನುಗಳನ್ನು ಕೆಮಿಕಲ್ ಅನಲೈಸಸ್ ಮಾಡಲಿಕ್ಕೆ ಗೋವಾದಲ್ಲಿರುವ ಇಂಡಿಯನ್ ಇನ್ಸಿಟ್ಯೂಟ್ ಆಫ್ ಓಸಿಯನಾಲಜಿಗೆ ಕಳಿಸಿದರು. ಅಲ್ಲಿಂದ ಬಂದ ರಿಪೋರ್ಟ್ ಪ್ರಕಾರ ಮರ್ಕ್ಯೂರಿ ಅಂಶ ಅದರಲ್ಲಿರುವುದು ೦.೦೨ ಅಂತ ತಿಳಿದು ಬಂತು. ಈ ಮರ್ಕ್ಯೂರಿ ಅಂಶ ೦.೧೦ರ ವರೆಗೆ ಇದ್ದರೂ ಸಹ ಅದರಿಂದ ನಮ್ಮ ಆರೋಗ್ಯಕ್ಕೆ ಯಾವುದೇ ತರಹ ತೊಂದರೆ ಇಲ್ಲವೆಂದು ವೈದ್ಯರು ಸರ್ಟಿಫೈ ಮಾಡಿದ್ದಾರೆ ಈ ಅನಾಲಸಿಸ್ ರಿಪೋರ್ಟ್ ಬಂದಮೇಲೆ ನಮ್ಮ ಕಾರ್ಯದರ್ಶಿಯವರು 'ಈ ಮೀನನ್ನು ತಿನ್ನುವುದರಲ್ಲಿ ಆರೋಗ್ಯಕ್ಕೆ ಯಾವ ಅಪಾಯವೂ ಇಲ್ಲ' ಎಂದು ಹೇಳಿದ್ದಾರೆ. ಆದರೆ ಮೀನುಗಾರರ ಸಮಸ್ಯೆ ಇದರಿಂದ ಬಗೆಹರಿಯಲಿಲ್ಲ. ಇದಕ್ಕೆ ಕಾರಣ ಏನು ಅಂದರೆ, ಕಾರವಾರದ ನಗರಪಾಲಿಕೆಯವರು ಉದ್ದೇಶ ಒಳ್ಳೆಯದೆಂದು ಇಟ್ಟುಕೊಂಡರೂ ಕೂಡ, ಅವಸರವಸರವಾಗಿ ಬಹುಶಃ ಅನಾವ್ಯಕವಾಗಿ ಶಹರದಲ್ಲಿ ಡಂಗೂರ ಹೊಡಿಸಿದರು, 'ಕಾರ್ಖಾನೆಯವರು ಈ ಮಾಲೀನ್ಯವಿರತಕ್ಕಂಥ ನೀರನ್ನು ಸಮುದ್ರಕ್ಕೆ ಬಿಡುವುದರಿಂದ, ಸಮುದ್ರದಲ್ಲಿನ ಮೀನನ್ನು ತಿಂದರೆ ಅದು ಆರೋಗ್ಯಕ್ಕೆ ಅಪಾಯಕಾರಿ' ಎಂದು ಅವರು ಹೇಳಿದ್ದರಿಂದ ಇಡೀ ಕಾರವಾರದ ಜನತೆಯಲ್ಲಿ ಒಂದು ಬಗೆಯ ಹೆದರಿಕೆ ಉಂಟಾಯಿತು. ನಾನು ಅಲ್ಲಿಗೆ ಹೋಗಿ ಕಾರ್ಖಾನೆಯವರನ್ನು ಕರೆಸಿ ಸದ್ಯಕ್ಕೆ ಕೂಡಲೇ ನಿಲ್ಲಿಸಬೇಕೆಂದು ಹೇಳಿದೆ. ಅವರು ನನ್ನ ಮಾತಿಗೆ ಮನ್ನಣೆ ಕೊಟ್ಟು ಮಲೀನಯುಕ್ತಾ ನೀರು ಸಮುದ್ರಕ್ಕೆ ಬಿಡುವುದನ್ನು ನಿಲ್ಲಿಸಿದರು. ಸರ್ಕಾರಕ್ಕೆ ಈ ಕಾರ್ಖಾನೆಯನ್ನು ಶಾಶ್ವತವಾಗಿ ಸಲ್ಲಿಸತಕ್ಕಂಥ ಅಧಿಕಾರ ಕಾಯಿದೆ ಪ್ರಕಾರ ಇಲ್ಲ. ಮಾಲೀನ್ಯದಿಂದ ಕೂಡಿದ ನೀರಿನಲ್ಲಿ ಮರ್ಕ್ಯೂರಿ ಪ್ರಮಾಣ ಅಪಾಯಕಾರಿ ಎಂದು ಕಂಡು ಬಂದರೆ ಬೇಕಾದರೆ ಕಾಯದೆ ಪ್ರಕಾರ ನಿಲ್ಲಿಸಲಿಕ್ಕೆ ಬರುತ್ತದೆ. ನಿನ್ನೆ ದಿವಸ ಕಾರವಾರದಿಂದ ಒಂದು ನಿಯೋಗ ಬಂದಿತ್ತು. ಅವರು ಶ್ರೀ ದೇಶಪಾಂಡೆಯವರನ್ನು ಭೇಟಿ ಮಾಡಿ ನನ್ನನ್ನು ಕೂಡ ಭೇಟಿಯಾಗಿದ್ದರು. ಸಂಬಂಧಪಟ್ಟ ಮಂತ್ರಿಯವರನ್ನು ಭೇಟಿಯಾದರೆ ಅವರು ಸೂಕ್ತ ಕ್ರಮ ತೆಗೆದುಕೊಳ್ಳುತ್ತಾರೆಂದು ನಾನು ಹೇಳಿದ್ದೇನೆ ಈಗ ನಮ್ಮ ಮುಂದೆ ಇರತಕ್ಕಂಥ ವಿಚಾರ ಎರಡೂ ಇವೆ. ಜನರ ಮನಸ್ಸಿನಲ್ಲಿ ಏನು ಭಯ ಹುಟ್ಟಿರುವುದು ಇದೆ, ಅದನ್ನು ಯಾವ ರೀತಿಯಲ್ಲಿ ಹೋಗಲಾಡಿಸಬೇಕು ಎನ್ನುವುದು ಒಂದು. ಎರಡನೇಯದು, ಸಮುದ್ರಕ್ಕೆ ಬಿಡುವ ಕಾರ್ಖಾನೆಯ ನೀರನ್ನು ಯಾವುದೇ ಬೇರೆ ರೀತಿಯಲ್ಲಿ ಡಿಸ್‌ಪೋಸ್ ಮಾಡಲಿಕ್ಕೆ ಅಂದರೆ ಸುಟ್ಟು ಹಾಕಲಿಕ್ಕೆ ಬರುತ್ತದೆಯೇ ಎನ್ನುವುದು. ಈ ಎರಡೂ ಮಾರ್ಗಗಳನ್ನು ಯೋಚನೆ ಮಾಡುತ್ತಿದ್ದೇವೆ. ಹಿಂದೆ ಈ ವಿಚಾರ ಬಂದಾಗ, ಈ ಕಾರ್ಖಾನೆಯ ಮೇಲೆ ಹಿಂದಿನ ಸರ್ಕಾರ ಒಂದು ನಿರ್ಬಂಧವನ್ನು ಹಾಕಿತ್ತು. ಈ ಮಾಲೀನ್ಯದಿಂದ ಕೂಡಿದ ಡಿಸ್‌ಚಾರ್ಜ್ ಏನಿದೆ, ಇದನ್ನು ಸಮುದ್ರದಲ್ಲಿ ಮೂರು ಕಿಲೋಮೀಟರ್ ದೂರ ಕೊಳವೆ ಮೂಲಕ ತೆಗೆದುಕೊಂಡು ಹೋಗಿ ಬಿಡಬೇಕು ಮೂರು ಕಿಲೋಮೀಟರ್ ದೂರ ತೆಗೆದುಕೊಂಡುಹೋಗಿ ಬಿಟ್ಟರೆ ಸಮುದ್ರದಲ್ಲಿ ಒಳಗಡೆ ಪ್ರವಾಹ ಜೋರು ಇರುತ್ತದೆ ಮತ್ತು ಇಡೀ ಸಾಗರದಲ್ಲಿ ಅದು ಹರಡಿಕೊಳ್ಳುತ್ತದ. ಈಗ ಕೆಲವು ದಿನಸಗಳ ಹಿಂದೆ ಈ

ಪೈಪು ತೆರೆಗಳ ರಭಸದಿಂದಲೋ ಏನೋ ಒಡೆದುಹೋಗಿದೆ. ಇದನ್ನು ರಿಪೇರಿ ಮಾಡಲೇಬೇಕೆಂದು ನಾನು ಹೇಳಿದ್ದೇನೆ. ಇದನ್ನು ರಿಪೇರಿ ಮಾಡಬೇಕೆಂದರೆ ಲಕ್ಷಾಂತರ ರೂಪಾಯಿ ಖರ್ಚಾಗುತ್ತದೆ. ಸಮುದ್ರದ ನಾಲ್ಕೈದು ಮೀಟರ್ ಕೆಳಗಡೆ ಸಿಮೆಂಟ್ ಕಾಂಕ್ರೀಟ್‌ನಿಂದ ಮಾಡತಕ್ಕಂಥಾದ್ದು ಇದು. ಈ ವಿಚಾರದಲ್ಲಿ ಚರ್ಚೆ ನಡೆಯುತ್ತಿದೆ. ಮಾನ್ಯ ಸದಸ್ಯರಿಗೆ ಮತ್ತು ಕಾರವಾರದ ನಾಗರೀಕರಿಗೆ ನಾನು ಆಶ್ವಾಸನೆ ಕೊಡುವುದೇನೆಂದರೆ. ಕೇವಲ ಗೋವಾದಲ್ಲಿ ಮಾತ್ರ ಈ ಪರೀಕ್ಷೆಯನ್ನು ಮಾಡಿಸಿಲ್ಲ. ಮೈಸೂರಿನ ಸಿ.ಎಫ್.ಟಿ.ಆರ್.ಐ.ನಲ್ಲಿ ಕೂಡ ಪರೀಕ್ಷೆ ಮಾಡಿಸಿದ್ದೇವೆ. ಇನ್ನೊಂದು ಕೊಯಮುತ್ತೂರಿನಲ್ಲಿರಬೇಕು, ಸರಿಯಾಗಿ ನೆನಪಿಲ್ಲ. ಮದ್ರಾಸಿನ ಮತ್ತೊಂದು ಸಂಸ್ಥೆಯಲ್ಲಿ ಕೂಡ ಪರೀಕ್ಷೆ ಆಗಿದೆ. ಹೀಗೆ ಮೂರು ಕಡೆಗಳಲ್ಲಿ ಪರೀಕ್ಷೆ ಮಾಡಿಸಲಾಗಿದೆ. ಈ ಮೂರು ಕಡೆಗಳಿಂದಲೂ ಬಂದ ಕೆಮಿಕಲ್ ಅನಾಲಿಸಿಸ್ ರಿಪೋರ್ಟ್ ಪ್ರಕಾರ ಈಗಿನ ಪರಿಸ್ಥಿತಿಯಲ್ಲಿ ಅಲ್ಲಿ ಮೀನನ್ನು ತಿಂದರೆ ಆರೋಗ್ಯಕ್ಕಾಗಲೀ, ಪ್ರಾಣಕ್ಕಾಗಲೀ ಯಾವುದೇ ಹಾನಿ ಇರುವುದಿಲ್ಲ. ಮಾನ್ಯ ಕೈಗಾರಿಕಾ ಮಂತ್ರಿಗಳು ಮತ್ತು ಮೀನುಗಾರಿಕೆಯ ಮಂತ್ರಿಗಳು ಈ ವಿಚಾರದಲ್ಲಿ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಪ್ರಭಾಕರ ರಾಣೆ ಎನ್.—ಮಾನ್ಯ ಮುಖ್ಯಮಂತ್ರಿಯವರಿಗೆ ಒಂದು ಸೂಚನೆಯನ್ನು ಕೊಡಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಹೇಳಿದಂತೆ ಈಗ ಸಮುದ್ರದಲ್ಲಿ ಬಿಡತಕ್ಕಂಥ ನೀರಿನಲ್ಲಿ ಮರ್ಕ್ಯುರಿ ಪ್ರಮಾಣ ಏನು ೦.೦೨ ಇದೆ, ಇದು ೦.೦೫ವರೆಗೆ ಇದ್ದರೂ ಕೂಡ ಮನುಷ್ಯನ ಜೀವಕ್ಕೆ ಅಪಾಯಕಾರಿಯಲ್ಲ ಅಂತ ಇದೆ.

ಅಧ್ಯಕ್ಷರು.—ಇಲ್ಲ ಅಂತ ಹೇಳಿದ್ದಾರಲ್ಲ.

ಪರಿಸರ ಮಾಲಿನ್ಯ ನಿಯಂತ್ರಣ ಮಂಡಲಿಯ ಕಾರ್ಯದರ್ಶಿಯವರು ಅನಿರೀಕ್ಷಿತ ಭೇಟಿ ನೀಡಿದಾಗ ಅವರು ಶ್ಯಾಂಪಲ್‌ಗೆ ಒಂದು ಮೀನನ್ನು ತೆಗೆದುಕೊಂಡು ಸಮುದ್ರ ಸಂಶೋಧನಾ ಸಂಸ್ಥೆಯಲ್ಲಿ ಪರೀಕ್ಷೆ ಮಾಡಿ ಆ ಒಂದು ಅಭಿಪ್ರಾಯಕ್ಕೆ ಬಂದಿದ್ದಾರೆ. ಹಾಗೂ ಅಲ್ಲಿಯ ಜನರ ಮತ್ತು ಮೀನುಗಾರರ.........

ಅಧ್ಯಕ್ಷರು.—ಉತ್ತರ ಹೇಳಿದ್ದಾರೆ. ಕ್ಲಾರಿಫಿಕೇಶನ್ ಕೇಳಿ.

ಶ್ರೀ ಪಿ. ಎಸ್. ರಾಣೆ.—೩.೫೦ ಮೀಟರ್ ಆಳದಲ್ಲಿ ಪೈಪ್ಲೈನ್ ತೆಗೆದುಕೊಂಡು ಹೋದರೆ ಅಪಾಯವಿಲ್ಲವೆಂದು ಹೇಳಿದ್ದಾರೆ. ಆದರೆ ಅಲ್ಲಿಯ ಪೈಪ್‌ಲೈನ್ ಒಡೆದು ೨ ವರ್ಷಗಳಾಗುತ್ತಾ ಬಂತು. ಆದರೆ ಇನ್ನೂ ದುರಸ್ತಿ ಆಗಿಲ್ಲ. ಹಾಗೂ ಮುಂದೆ ದುರಸ್ತಿ ಆಗುವ ಸಂಭವ ಇಲ್ಲ. ಆದರೆ ಇದೇ ರೀತಿ ಗೋವಾದಲ್ಲಿ ಒಂದು ಪ್ರಸಂಗ ಆದಾಗ, ಅಲ್ಲಿನ ಒಂದು ಕಂಪನಿ ದೋಷಪೂರಿತ ನೀರನ್ನು ನದಿಗೆ ಬಿಡುವ ಸಂದರ್ಭದಲ್ಲಿ ಜನರು ಪ್ರತಿಭಟನೆ ಮಾಡಿ ಚಳುವಳಿ ಮಾಡಿದ ನಂತರ ಸರ್ಕಾರ ಕೂಡಲೇ ನಿಲ್ಲಿಸಿ ಬೇರೆ ವ್ಯವಸ್ಥೆ ಆಗುವವರೆಗೆ ಆ ಕಾರ್ಖಾನೆಯನ್ನು ಬಂದ್ ಮಾಡಿದರು. ಅದೇ ರೀತಿ ಇಲ್ಲಿ ಮುಂದೆ ಅಪಾಯ ನಿವಾರಣ ಆಗುವವರೆಗೆ ಕಾಯಿದೆ ಇದನ್ನು ಬಂದ್ ಮಾಡುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—ಮುಂದಿನ ವಿಷಯ.

ಶ್ರೀ ಪಿ. ಎಸ್. ರಾಣೆ.—ನನಗೆ ಉತ್ತರ ಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಈ ಬಗ್ಗೆ ಮಾತುಕತೆ ನಡೆದಿದೆ.

ಅಧ್ಯಕ್ಷರು.—ಈಗ ಮುಂದಿನ ವಿಷಯ.

ಶ್ರೀ ಆರ್. ಎನ್. ನಾಯಕ್.—ಅಧ್ಯಕ್ಷರೇ, ಈ ತಿಂಗಳ ಆರನೇ ತಾರೀಖಿನ ದಿವಸ ಎಂದರೆ, ಚುನಾವಣೆ ಮುಗಿದು ನಾನು ಆರಿಸಿ ಬಂದ ನಂತರ ನಾನು ದೇವಸ್ಥಾನಕ್ಕೆ ಹೋಗಬೇಕೆಂದು ಮಧ್ಯಾಹ್ನ ಹೊರಟೆ. ಆದರೆ ಗುಣವಂತಿ ಗ್ರಾಮದ ಬಳಿ ಬಂದಾಗ ಅಲ್ಲಿನ ಸುಮಾರು ೧೫೦ ಜನ ಗೂಂಡಾಗಳು ನಾನು ಹೋಗುತ್ತಿದ್ದ ವಾಹನದ ಮೇಲೆ ಕಲ್ಲು ತೂರಿದ್ದರಿಂದ ಕೆಲವರಿಗೆ ಗಾಯವಾಗಿದೆ. ಆಗ ಜೊತೆಯಲ್ಲಿ ಪೋಲೀಸಿನವರು ಇದ್ದರು. ಅವರು ಇಬ್ಬರು-ಮೂವರನ್ನು ಹಿಡಿದು ಹಾಗೇ ಅಲ್ಲಿ ಬಿಟ್ಟು ಬಿಟ್ಟರು. ಅವರುಗಳು ಗುಡ್ಡದ ಮೇಲೆ ನಿಂತು ಕೆಳಗೆ ಹೋಗುವ ರಾಷ್ಟ್ರೀಯ ಹೆದ್ದಾರಿಯಲ್ಲಿ